

## ಜರ್ಮನ್ ಬೆಳ್ಳಿ ಪಾತ್ರೆ

ಬೆಳ್ಳಿಯಂತೆ ಕಾಣುವ ಜರ್ಮನ್ ಬೆಳ್ಳಿಯ ಪರಿಕರಗಳು. ಹಿಂದೆ ರಾಜ , ಮಂತ್ರಿ, ಇತರ ಸಿರಿವಂತರ ಮನೆಗಳಲ್ಲಿ ಬೆಳ್ಳಿ ಮತ್ತು ಬಂಗಾರದವು ಇದ್ದರೆ, ಸಾಮಾನ್ಯರ ಮನೆಯಲ್ಲಿ ಈ ತರಹದ ಜರ್ಮನ್ ಬೆಳ್ಳಿಯ ಜಗ್, ಲೋಟ, ತಟ್ಟೆ, ಗಿಂಡಿ, ಪನ್ನೀರ್ ಗಿಂಡಿ ಮುಂತಾದ ವಸ್ತುಗಳು ಇರುತ್ತಿದ್ದವು.

**-ಲೀಲಾವತಿ ಜಯಶೀಲ, ಶಿವಮೊಗ್ಗ**

## ಬಿಳಿ ಗರಿಕೆ (ಹುಲ್ಲುವ್ವು!)

ಏನೂ ಬೀಜ ಬಿತ್ತದ ಹೊಲಗಳಲ್ಲಿ ಹುಲುಸಾಗಿ ಬೆಳೆಯುವ ಕಳೆ ಗರಿಕೆ ಹುಲ್ಲು. 'ಗ್ರಾಮಿನೆ' ಸಸ್ಯ ಕುಟುಂಬಕ್ಕೆ ಸೇರಿದ ಗರಿಕೆ ಕಾಂಡ, ಗೆಣ್ಣು– ಅಂತರ ಗೆಣ್ಣುಗಳನ್ನು ಹೊಂದಿದ್ದು, ಗೆಣ್ಣುಗಳಲ್ಲಿ ಬೇರು, ಎಲೆಗಳು ಕಂಡು ಬರುತ್ತವೆ. ಭೂಗತ ಕಾಂಡವನ್ನು ಹೊಂದಿರುವುದರಿಂದ ಮೇಲ್ಭಾಗದಲ್ಲಿ ಎಷ್ಟೇ ಕಡಿದು ಕತ್ತರಿಸಿದರೂ ಮತ್ತೆ ಮತ್ತೆ ಚಿಗುರುವ ಗುಣ ಇದರದ್ದು.

ಸಾಮಾನ್ಯವಾಗಿ ಹಸಿರು ಎಲೆಗಳನ್ನು ಹೊಂದಿರುವ ಈ ಗರಿಕೆ ಹುಲ್ಲಲ್ಲಿ ಬಿಳಿಯ ಎಲೆಗರಿಕೆಯೂ ಅಪರೂಪಕ್ಕೆ ಕಂಡು ಬಂದು ಆಶ್ಚರ್ಯ ಮೂಡಿಸುತ್ತದೆ. ಇದಕ್ಕೆ ಎಲೆಯಲ್ಲಿರುವ ಕ್ಲೋರೊಫಿಲ್ ಕೊರತೆ ಕಾರಣವೆಂದು ಶಾಸ್ತ್ರಜ್ಞರು ಹೇಳಿದರೂ, ಈ ಬಿಳಿ ಗರಿಕೆಯನ್ನು 'ಹುಲ್ಲು ಹೂವು' ಎಂದು ಪರಿಗಣಿಸಿದ್ದಾರೆ. ಆಯುರ್ವೇದದಲ್ಲಿ ಗರಿಕೆಗೆ ಹೆಚ್ಚಿನ ಪ್ರಾಶಸ್ತ್ಯವಿದೆ. ಚರ್ಮ, ಕಣ್ಣು ಉರಿಗೆ ಇದರ ರಸ ಅತ್ಯುತ್ತಮ ಔಷಧಿ.

**-ಎಸ್. ಓಂಕಾರಯ್ಯ ತವನಿಧಿ, ದಾವಣಗೆರೆ**






## ಶತಮಾನ ಕಂಡ ಗಡಿಯಾರ

ಚಿತ್ರದಲ್ಲಿರುವ ಗೋಡೆ ಗಡಿಯಾರ 1896ರಲ್ಲಿ ಖರೀದಿಸಿದ್ದು. 122 ವರ್ಷಗಳು ಕಳೆದಿದೆ. ಈಗಲೂ ಸಮಯ ಮತ್ತು ದಿನಾಂಕವನ್ನು ಸರಿಯಾಗಿ ತೋರಿಸುತ್ತದೆ. ಅಲಾರ್ಮ್ ಸಹ ಜೋರಾಗಿ ಬಾರಿಸುತ್ತದೆ. ವಾರಕ್ಕೆ ಒಂದು ಸಲ ಚಾವಿ ಕೊಡಬೇಕು. ಈ ಗೋಡೆ ಗಡಿಯಾರ ಬಳ್ಳಾರಿ ನಿವಾಸಿ ಕೊಂಡಕುಂದಿ ಚಂದ್ರನಾಥ ವಿಜಯಲಕ್ಷ್ಮೀ ದಂಪತಿಯ ಮನೆಯಲ್ಲಿದೆ.

**-ವಿ.ಎಸ್. ಹಿಂದುಪುರ, ಬಳ್ಳಾರಿ**